ಅನ್ನಪೂರ್ಣ ಯೋಜನೆ ಜಾರಿಗೊಳಿಸುವುದು.

53(315) - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನ್ನಪೂರ್ಣ ಯೋಜನೆ ಜಾರಿಗೆ ಬಂದಿದೆಯೇ, ಈ ಯೋಜನೆ ಎಂದಿನಿಂದ ರಾಜ್ಯದಲ್ಲಿ ಜಾರಿಗೆ ಬಂದಿತು, ಎಂದಿನಿಂದ ಅನುಷ್ಠಾನಕ್ಕೆ ತರಲಾಯಿತು.

ಆ) ಈ ಯೋಜನೆಯಡಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ, ಈ ಸೌಲಭ್ಯಗಳ ಅಡಿಯಲ್ಲಿ ಎಷ್ಟು ಜನರಿಗೆ ಆಹಾರಧಾನ್ಯ ವಿತರಣೆ ಮಾಡಲಾಗಿದೆ, (ವಿವರ ನೀಡುವುದು);

ಇ) ಈ ಯೋಜನೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಸಬ್ಸಿಡಿ ಹಣ ಎಷ್ಟು ಈ ಯೋಜನೆಗೆಂದು ಸರ್ಕಾರ ಮೀಸಲಿಟ್ಟ ಹಣ ಎಷ್ಟು?

ಶ್ರೀ ರಾಮಲಿಂಗಾರೆಡ್ಡಿ : ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು.

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೋಡಿ ಬಹಳ ಆಶ್ಚರ್ಯವಾಗುತ್ತಿದೆ. ಮೂರು ಪ್ರಶ್ನೆಗಳಿಗೆ "ಇಲ್ಲ" ಅನ್ನುವುದೇ ಒಂದು ಉತ್ತರ. ಅನ್ನಪೂರ್ಣ ಯೋಜನೆಯಲ್ಲಿ ಯಾವ ಫಲಾನುಭವಿಗಳಿಗೆ ಯಾವ ನಿಯಮದಡಿಯಲ್ಲಿ ಆಯ್ಕೆ ಮಾಡುವ ಪದ್ಧತಿ ಇದೆ? ಮಾನದಂಡ ಏನು ಎನ್ನುವುದನ್ನು ದಯವಿಟ್ಟು ಹೇಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ;

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಅನ್ನಪೂರ್ಣ ಯೋಜನೆಯನ್ನು ಈ ವರ್ಷದ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಪ್ರಾರಂಭ ಮಾಡಿದರು. ಅದರಲ್ಲಿ ಕಡು ಬಡವರು ನಿರ್ಗತಿಕರು ಯಾರಿದ್ದಾರೆ ಅವರಿಗೆ 10 ಕೆ.ಜಿ. ರೇಷನ್ ಉಚಿತವಾಗಿ ಕೊಡುವುದಕ್ಕೆ ಕೇಂದ್ರ ಸರ್ಕಾರದವರು ನಿರ್ದೇಶನ ಕೊಟ್ಟಿದ್ದಾರೆ. ಹಾಗೆಯೇ ಅವರಿಗೆ 65 ವರ್ಷ ವಯಸ್ಸಾಗಿರಬೇಕು ಮತ್ತು ಅವರು ಓಲ್ಡ್ ಏಜ್ ಪೆನ್‌ಷನ್ ತೆಗೆದುಕೊಳ್ಳತ್ತಿರಬಾರದು ಎಂಬ ನಿಬಂಧನೆಗಳಿವೆ. ಕೇಂದ್ರ ಸರ್ಕಾರದಿಂದ 3,40,100 ಜನರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಡುತ್ತಿದ್ದಾರೆ ಮತ್ತು ನಾವು ರಾಜ್ಯಸರ್ಕಾರದವರು ಸೇರಿ ಒಟ್ಟು 4,85,000 ಜನರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಡುತ್ತಿದ್ದೇವೆ. ಇದರಲ್ಲಿ ಸೆಂಟ್ರಲ್ ಮತ್ತು ಸ್ಟೇಟ್ ಎರಡೂ ಸೇರಿದೆ. 3,40,100 ರಲ್ಲಿ ಅದರ 20 ಪರ್ಸೆಂಟ್‌ನಷ್ಟು ಅನ್ನಪೂರ್ಣ ಯೋಜನೆ ಮಾಡಬಹುದೆಂದು ಅವರೇ ಹೇಳಿದ್ದಾರೆ. ಆದರೆ ಬಹುತೇಕ ಇಲ್ಲಿ ಏನಾಗಿದೆ ಎಂದರೆ 10 ಕೆ.ಜಿ. ರೇಷನ್‌ಗೆ 50 ರೂಪಾಯಿಂದ 60 ರೂಪಾಯಿಗಳಲ್ಲಿ ಮುಗಿದುಹೋಗುತ್ತದೆ. ಓಲ್ಡ್ ಏಜ್ ಪೆನ್‌ಷನ್‌ನಲ್ಲಿ 100 ರೂಪಾಯಿಗಳು ಸಿಗುತ್ತದೆ. ಇದರಿಂದ ಫಲಾನುಭವಿಗಳು ಯಾರೂ ಮುಂದೆ ಬರುತ್ತಿಲ್ಲ. ಈಗ ಕೇಂದ್ರ ಸರ್ಕಾರದವರು ಓಲ್ಡ್ ಏಜ್

ಪೆನ್‌ಷನ್, ನ್ಯಾಷನಲ್ ಬೆನಿಫಿಟ್ಸ್ ಸ್ಕೀಂ ಮತ್ತು ಅನ್ನಪೂರ್ಣ ಸ್ಕೀಂನ್ನು ನಮ್ಮ ರಾಜ್ಯಕ್ಕೆ ಹಸ್ತಾಂತರ ಮಾಡಿದ್ದಾರೆ. ಈ ಬಗ್ಗೆ ಇವತು ಚೀಫ್ ಸೆಕ್ರೆಟರಿಯವರ ಚೇಂಬರ್ ನಲ್ಲಿ ಮೀಟಿಂಗ್ ನಡೆಯುತ್ತಿದೆ ಮತ್ತು ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ಓಲ್ಡ್‌ಏಜ್ ಪೆನ್‌ಷನ್‌ನ್ನು ಯಾರಿಗೆ ಕೊಡುತ್ತಾರೆಂದರೆ, ಗಂಡು ಮಕ್ಕಳು ಯಾರಿಗೆ ಇರುವುದಿಲ್ಲ ಹಾಗೂ ಬಡತನ ರೇಖೆಗಿಂತ ಕೆಳಗಿರತಕ್ಕಂಥವರಿಗೆ ಈ ಒಂದು ಪೆನ್‌ಷನ್ ಕೊಡುವಂಥ ವ್ಯವಸ್ಥೆಯಿದೆ. ಆದರೆ ಈ ಅನ್ನಪೂರ್ಣ ಯೋಜನೆ ಇರುವಂಥಾದ್ದು ಪ್ರಮುಖವಾಗಿ ಯಾರು 65 ವರ್ಷ ಆಗಿದ್ದಂಥ ವೃದ್ಧರಿದ್ದಾರೆ, ಅವರಿಗೆ ಗಂಡು ಮಕ್ಕಳು ಇರಲಿ, ಹೆಣ್ಣು ಮಕ್ಕಳು ಇರಲಿ, ಬಡತನ ರೇಖೆಯಿಂದ ಕೆಳಗೆ ಇರತಕ್ಕಂಥವರಿಗೆ 10 ಕೆ.ಜಿ.ಅಕ್ಕಿಯನ್ನು ಉಚಿತವಾಗಿ ಕೊಡಲಿಕ್ಕೆ ಪ್ರತಿಯೊಂದು ರಾಜ್ಯಸರ್ಕಾರ ನಿರ್ಣಯವನ್ನು ಮಾಡಬೇಕು. ಅದರ ಪ್ರಕಾರದಲ್ಲಿ 2001-2002ನೇ ಇಸವಿಯಲ್ಲಿ 35 ರಾಜ್ಯಗಳಿಗೆ 164.15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕರ್ನಾಟಕ ರಾಜ್ಯಕ್ಕೆ ಈ ಸಾಲಿನಲ್ಲಿ 4.55 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಆದರೆ ಕರ್ನಾಟಕ ರಾಜ್ಯಸರ್ಕಾರ ಈ ಯೋಜನೆಯ ಫಲಾನುಭವಿಗಳು ರಾಜ್ಯದಲ್ಲಿ ಇಲ್ಲವೆಂದು ತಿಳಿಸಿರುವುದರಿಂದ ಹಣ ಬಿಡುಗಡೆ ಮಾಡಲಿಲ್ಲವೆಂದು ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರಾದಂಥ ಶ್ರೀ ವೆಂಕಯ್ಯನಾಯ್ಡು ಅವರು ಶ್ರೀ ಕೆ.ಸಿ. ಕೊಂಡಯ್ಯನವರಿಗೆ ರಾಜ್ಯ ಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅಂದರೆ ರಾಜ್ಯಸರ್ಕಾರದಿಂದ ಪತ್ರ ಬರೆದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 65 ವರ್ಷಗಳು ದಾಟಿದಂಥ ಯಾರೂ ವೃದ್ಧರು ಇಲ್ಲವೇ ಇಲ್ಲ ಎನ್ನುವ ಉತ್ತರವನ್ನು ರಾಜ್ಯ ಸರ್ಕಾರ ಬರೆದಿದೆ ಎನ್ನುವುದಾದರೆ, ಬಂದಿರುವಂಥ ಹಣವನ್ನು ಉಪಯೋಗಿಸಿಕೊಳ್ಳಲಿಲ್ಲ ಎನ್ನುವುದಾದರೆ ಇದರ ಅರ್ಥ ಏನು? ಕಳೆದ ಎರಡು ವರ್ಷಗಳಿಂದ ಪ್ರತಿಯೊಂದು ರಾಜ್ಯದಲ್ಲೂ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡಿ ಕಳುಹಿಸಿದ್ದಾರೆ. ಆದರೆ ನಮ್ಮ ರಾಜ್ಯದಿಂದ ಪಟ್ಟಿಯನ್ನು ತಯಾರು ಮಾಡಿ ಕಳುಹಿಸಲಿಕ್ಕೆ ಇದ್ದಂಥ ತೊಂದರೆಗಳು ಏನು?

ಶ್ರೀ ರಾಮಲಿಂಗರೆಡ್ಡಿ: ಮಾನ್ಯ ಅಧ್ಯಕ್ಷರೆ, ಅನ್ನಪೂರ್ಣ ಯೋಜನೆ ಈ ವರ್ಷ ಪ್ರಾರಂಭವಾದಂಥ ಕಾರ್ಯಕ್ರಮ. ಈ ಯೋಜನೆಗೆ ಫಲಾನುಭವಿಗಳನ್ನು ಗುರುತಿಸಬೇಕಾದರೆ ಅವರಿಗೆ 65 ವರ್ಷ ವಯಸ್ಸಾಗಿದ್ದು ಓಲ್ಡ್‌ಏಜ್ ಪೆನ್‌ಷನ್ ತೆಗೆದುಕೊಳ್ಳುತ್ತಿರಬಾರದೆನ್ನುವ ಗೈಡ್‌ಲೈನ್ಸ್ ಕೇಂದ್ರಸರ್ಕಾರದಿಂದ ಇದೆ. ಆದರೆ ಈಗ ಈ ಮೂರು ಸ್ಕೀಂಗಳನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡಿದ್ದಾರೆ. ಇವತ್ತು ಚೀಫ್ ಸೆಕ್ರೆಟರಿ ಚೇಂಬರ್‌ನಲ್ಲಿ ಮೀಟಿಂಗ್ ನಡೆಯುತ್ತಿದೆ. ನಂತರ ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ಈ ಅನ್ನಪೂರ್ಣ ಯೋಜನೆ ಈ ವರ್ಷದಲ್ಲಿ ಪ್ರಾರಂಭವಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಈ ವರ್ಷದಲ್ಲಿ ಅದು ಪ್ರಾರಂಭವಾಗಿದ್ದಲ್ಲ. 2001-2002ನೇ ಇಸವಿಯಲ್ಲಿ ಬಂದಂಥ ಹಣವನ್ನು ಖರ್ಚು ಮಾಡದೆ ಅದು ವಾಪಸ್ಸು ಹೋಗಿದೆ ಹಾಗೂ ಇವತ್ತು ಬಡವರನ್ನು ಗುರುತು ಮಾಡುವಂಥ ಕೆಲಸ ಆಗಿಲ್ಲವೆಂದರೆ ಹೇಗೆ?

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಲ್ಲ "ಅನ್ನಪೂರ್ಣ" ಮತ್ತು "ಅಂತ್ಯೋದಯ" ಎನ್ನುವ ಎರಡು ಸ್ಕೀಂ ಇದೆ. ಅಂತ್ಯೋದಯ ಅನ್ನ ಯೋಜನೆ ಪ್ರಾರಂಭವಾಗಿದೆ. ಅನ್ನಪೂರ್ಣ ಯೋಜನೆಯನ್ನು ಈಗ ರಾಜ್ಯಸರ್ಕಾರಕ್ಕೆ ಹ್ಯಾಂಡ್ ಓವರ್ ಮಾಡಿದ್ದಾರೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ಈ ಎರಡು ಯೋಜನೆಗಳ ವ್ಯತ್ಯಾಸ ನಮಗೂ ಗೊತ್ತಿದೆ. ಅನ್ನಪೂರ್ಣ ಯೋಜನೆ ಹಿಂದಿನ ಸಾಲಿನಲ್ಲಿ ಪ್ರಾರಂಭವಾಗಿ ಇಡೀ ದೇಶದಲ್ಲಿ 164 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಶ್ರೀ ರಾಮದಾಸ್‌ರವರೆ, ಈ ಯೋಜನೆ ಕೇಂದ್ರ ಸರ್ಕಾರದಿಂದ ಈ ವರ್ಷ ಬಂದಿದೆ, ನಾವು ತೆಗೆದುಕೊಳುತ್ತಿದ್ದೇವೆ, ಚೀಫ್ ಸೆಕ್ರೆಟರಿ ಆಫೀಸ್‌ನಲ್ಲಿ ಮೀಟಿಂಗ್ ನಡೆಯುತ್ತಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರಲ್ಲಾ. ಇನ್ನು ಏನು ಬೇಕು?

ಶ್ರೀ ಎ. ರಾಮದಾಸ್: ರಾಜ್ಯದ ಬಡವರ ಹಿತಕೋರುವ ಪ್ರಶ್ನೆಯ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಈ ವರ್ಷ ನಮಗೆ ಬಂದಿದೆ ಎಂದು ಅವರು ಹೇಳುತ್ತಿದ್ದಾರಲ್ಲಾ. ಯಾವುದು ನಿಜ, ಯಾವುದು ಸುಳ್ಳು? ನೀವು ಓದುತ್ತಿರುವುದು ಸತ್ಯವೇ? ಅವರು ಹೇಳಿರಬಹುದು. ಈಗ ಮಾನ್ಯ ಮಂತ್ರಿಗಳು ಹೇಳುವುದನ್ನು ನಾವು ಕೇಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ರಾಮದಾಸ್ ರವರು ಕೇಳುತ್ತಿರುವ ಪ್ರಶ್ನೆ ಏನೆಂದರೆ, ಎರಡು ವರ್ಷಗಳಿಂದ ಈ ಯೋಜನೆ ಚಾರಿಯಲ್ಲಿದೆ.

ಅಧ್ಯಕ್ಷರು: ಇಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರಲ್ಲಾ. ನಾವು ಸದನದಲ್ಲಿ ಹೇಳುವ ಮಂತ್ರಿಗಳ ಮಾತುಗಳನ್ನು ಕೇಳೋಣವೋ? ಅಥವಾ ಪ್ರೆಸ್ ಕಟಿಂಗ್‌ಗಳನ್ನು ನಂಬೋಣವೋ ನೀವೇ ಹೇಳಿ?

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಅದನ್ನು ನಾವು ಒಪ್ಪುತ್ತೇವೆ. ಆದರೆ ಎರಡು ವರ್ಷಗಳಿಂದ ಈ ಯೋಜನೆ ಏತಕ್ಕೆ ವಿಫಲವಾಗಿದೆ ಎನ್ನುವುದನ್ನು ಅವರು ಹೇಳಬೇಕು.

ಅಧ್ಯಕ್ಷರು: ನಮ್ಮ ರಾಜ್ಯದಲ್ಲಿ ಹಿಂದೆ ಇದು ಇರಲಿಲ್ಲ, ಈಗ ಬಂದಿದೆ ಎಂದು ಮಂತ್ರಿಗಳು ಹೇಳುತ್ತಿದ್ದಾರಲ್ಲಾ.

ಶ್ರೀ ರಾಮಲಿಂಗಾರೆಡ್ಡಿ: ಈ ಹಿಂದೆ ಪ್ರಾರಂಭವಾಗಿರುವ ಯೋಜನೆ 'ಅಂತ್ಯೋದಯ ಅನ್ನ' ಎನ್ನುವುದು. 'ಅತ್ಯೋದಯ ಅನ್ನ' ಯೋಜನೆ ಮತ್ತು 'ಅನ್ನಪೂರ್ಣ' ಯೋಜನೆಗಳು ಬೇರೆ ಬೇರೆ ಯೋಜನೆಗಳು. ಅವರು 'ಅಂತ್ಯೋದಯ ಅನ್ನ' ಕಾರ್ಯಕ್ರಮದ ಬ್ಗಗೆ ಹೇಳುತ್ತಿರಬೇಕು. ಈಗ ಹೊಸದಾಗಿ ಪ್ರಾರಂಭವಾಗುತ್ತಿರುವ ಕಾರ್ಯಕ್ರಮ 'ಅನ್ನಪೂರ್ಣ'.

ಅಧ್ಯಕ್ಷರು: ಹೊಸಬಾಗಿ ಪ್ರಾರಂಭವಾಗಿರುವ ಕಾರ್ಯಕ್ರಮ ಎಂದು ಅವರು ಹೇಳುತ್ತಿದ್ದಾರೆ. ಆದರೂ ಮತ್ತೆ ನೀವು ಕನ್ ಫ್ಯೂಷನ್ ಮಾಡುತ್ತಿದ್ದೀರಿ. ಸದನದಲ್ಲಿ ಮಂತ್ರಿಗಳು ಸುಳ್ಳು ಹೇಳಲು ಆಗುತ್ತದೆಯೇ? ಮಂತ್ರಿಗಳು ಹೇಳಿದ್ದನ್ನು ನಾನು ಕೇಳಬೇಕು.

ಶ್ರೀ ಎ. ರಾಮದಾಸ್: ಹಿಂದಿನ ಮಂತ್ರಿಗಳು ಇಲ್ಲೇ ಉತ್ತರ ಕೊಟ್ಟಿದ್ದಾರೆ.

MR. SPEAKER: Please verify.

ಮುಳುಗಡೆಯಾಗುವ ಬಾಗಲಕೋಟೆ ಭಾಗಗಳನ್ನು ಭಾದಿತ ಪ್ರದೇಶವೆಂದು ಘೋಷಿಸುವುದು.

55(154) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷದ ಮುಂಗಡ ಪತ್ರದಲ್ಲಿ ಹೇಳಿರುವಂತೆ 525 ಮೀ. ಎಫ್ ಆರ್ ಎಲ್ ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲ ಕೋಟೆಯ ಭಾಗಗಳನ್ನು ಬಾಧಿತ ಪ್ರದೇಶ ಎಂದು ಪರಿಗಣಿಸಿ ಅದನ್ನು ಹಂತ ಹಂತವಾಗಿ ಸ್ವಾಧೀನ ಪಡಿಸಿಕೊಳ್ಳಲಾಗುವುದು ಎಂಬ ಅಂಶಗಳು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಭೂ ಸ್ವಾಧೀನಕ್ಕಾಗಿ ಪ್ರಸಕ್ತ ವರ್ಷ ಹಣವನ್ನೇನಾದರೂ ತೆಗೆದಿರಿಸಲಾಗಿದ್ದಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಹಾಗೂ ಯಾವ ಉದ್ದೇಶಗಳಿಗಾಗಿ ಮೀಸಲಿಡಲಾಗಿದೆ ತಿಳಿಸುವುದು.

ಇ) ಹಂತ ಹಂತವಾಗಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸಮಯದ ಗಡುವನ್ನೇನಾದರೂ ಹಾಕಿಕೊಳ್ಳಲಾಗಿದೆಯೇ, ಹಾಗಿದ್ದರೆ ಸಮಯಾವಕಾಶವೆಷ್ಟು:

ಈ) ಈ ಕುರಿತಂತೆ ಸರ್ಕಾರದಿಂದ ಹಮ್ಮಿಕೊಂಡ ವಿಸ್ತೃತ ಕ್ರಿಯಾ ಯೋಜನೆಗಳ ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಸರಕಾರ 2002-03 ಮುಂಗಡ ಪತ್ರದ ಕಂಡಿಕೆ 148 ರಲ್ಲಿ ತನ್ನ ನಿರ್ಧಾರ ಪ್ರಕಟಿಸಿದೆ. ಅದರ ಪ್ರಕಾರ 525 ಮೀ.ವರೆಗೆ ನೀರು ಸಂಗ್ರಹಣೆಯಾದಾಗ ಮುಳುಗಡೆಯಾಗುವ ಬಾಗಲಕೋಟೆಯ ಭಾಗಗಳನ್ನು ಭಾದಿತ ಪ್ರದೇಶವೆದು ಪರಿಗಣಿಸಿ ಹಂತ ಹಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದು.

ಆ) ಹಿಪ್ಪರಿನ ಮಟ್ಟ 521.00 ಮೀ.ವರೆಗೆ ಈಗಾಗಲೆ ಸ್ವಾಧೀನ ಪ್ರಕ್ರಿಯೆ ಮುಗಿದಿದೆ. 521.00 ಮೀ.ನಿಂದ 525.00 ಮೀ.ವರೆಗಿನ ಸ್ವಾಧೀನ ಪ್ರಕ್ರಿಯೆಯನ್ನು ಮುಂದೆ ಹಂತಹಂತವಾಗಿ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ಹಣವನ್ನು ತೆಗೆದಿರಿಸಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ಸೊಗಸಾಗಿ ಕೊಟ್ಟಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲರಂಥ ಸಚಿವರಿಂದ ನಾನು ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಪ್ರಾಥಮಿಕ ಶಾಲೆಯ ಹಂತದಲ್ಲಿ ನಾವು ನಾಲ್ಕನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಒಂದು ವೈಜ್ಞಾನಿಕವಾದಂಥ ಪ್ರಶ್ನೆ ಇತ್ತು. ರಾತ್ರಿಯ ಹೊತ್ತು